**ಅಸಲು ದಾವಾ ನಂ:91/2014**
**ಪಿ.ಡಬ್ಲ್ಯೂ:01**

**ದಿನಾಂಕ:23-07-2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲು: ಶ್ರೀ ಜಿ ಎಸ್., ಪ್ರತಿವಾದಿಗಳ ಪರ ವಕೀಲರಿಂದ**

13. ನಿಪಿ:35 ರಲ್ಲಿ ತಿಪ್ಪಗ ಪೌತಿ ಅವರ ಹೆಂಡತಿ ಓಬಮ್ಮ ಪೌತಿ, ಓಬಮ್ಮನ ಒಬ್ಬನೇ ಮಗ ಯಲ್ಲಪ್ಪ ಪೌತಿ,ಯಲ್ಲಪ್ಪನ ಹೆಂಡತಿ ಲಕ್ಷ್ಮಮ್ಮ ಪೌತಿ ಮತ್ತು ಯಲ್ಲಪ್ಪ ಮತ್ತು ಲಕ್ಷ್ಮಮ್ಮರವರಿಗೆ ಗಂಗಪ್ಪ, ಕೊಲಾರಪ್ಪ, ಪರಸಪ್ಪ ಎಂಬ 3 ಜನ ಮಕ್ಕಳು ಎಂದು ಸುಳ್ಳಾಗಿ ನಮೂದಿಸಿರುತ್ತೀರಾ ಎಂದರೆ ಸರಿಯಲ್ಲ.

14. ನಿಪಿ:35 ರಲ್ಲಿ ಎರಡನೇ ಬುಡ್ಡಜ್ಜಿ ಪೌತಿ, ಒಬ್ಬನೇ ಮಗ ರಾಮಚಂದ್ರಪ್ಪ ಪೌತಿ, ಹೆಂಡತಿ ಸಿದ್ದಮ್ಮ ಪೌತಿ ಮತ್ತು ರಾಮಚಂದ್ರಪ್ಪ ಹಾಗೂ ಸಿದ್ದಮ್ಮರಿಗೆ ಯಲ್ಲಪ್ಪ, ತಿಪ್ಪೇಸ್ವಾಮಿ ಮತ್ತು ನಾನು ಮಕ್ಕಳು ಎಂದು ಸುಳ್ಳಾಗಿ ನಮೂದಿಸಿರುತ್ತೀರಾ ಎಂದರೆ ಸರಿಯಲ್ಲ. ನಿಪಿ:35 ರ ದಾಖಲೆಯನ್ನು ನಾನು, ಗ್ರಾಮ ಲೆಕ್ಕಾಧಿಕಾರಿ ಮತ್ತು ತಹಶಿಲ್ದಾರವರು ಕೂಡಿಕೊಂಡು ಷರೀಕಾಗಿ ಸೃಷ್ಟಿಸಿರುತ್ತೇವೆ ಎಂದರೆ ಸರಿಯಲ್ಲ. ನಾನು ತಿಪ್ಪಗನ ವಂಶಸ್ಥರಲ್ಲ ಎಂದರೆ ಸರಿಯಲ್ಲ. ತಿಪ್ಪಗನ ವಂಶಸ್ಥರಾದ ಯಲ್ಲಪ್ಪ ಮತ್ತು ರಾಮಚಂದ್ರಪ್ಪನಿಗೆ ಯಾವುದೇ ಮಕ್ಕಳು ಇರಲಿಲ್ಲ ಎಂದರೆ ಸರಿಯಲ್ಲ. ಯಲ್ಲಪ್ಪ ಮತ್ತು ರಾಮಚಂದ್ರಪ್ಪ ಹಾಗೂ ಸದರಿಯವರ ಮಕ್ಕಳು ಮತ್ತು ನಾನು ರಾಮಜೋಗಿಹಳ್ಳಿಯಲ್ಲಿ ವಾಸ ಇರುವ ಬಗ್ಗೆ ನ್ಯಾಯಾಲಯಕ್ಕೆ ದಾಖಲೆಯನ್ನು ಹಾಜರುಪಡಿಸಿರುತ್ತೇನೆ. ಸಾಕ್ಷಿಯು ಮುಂದುವರಿದು ಪಹಣಿಯನ್ನು ನೀಡಿರುತ್ತೇವೆ ಎಂದು ನುಡಿಯುತ್ತಾರೆ. ಸದರಿ ವಿಚಾರವಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

15. ನಿಪಿ:35 ರಲ್ಲಿ ತಿಪ್ಪಗ ಗಂಗನ ಮೊದಲನೆ ಮಗ ಎಂದು ಸುಳ್ಳಾಗಿ ನಮೂದು ಆಗಿರುತ್ತದೆ ಎಂದರೆ ಸರಿಯಲ್ಲ. ಯಲ್ಲಪ್ಪ, ರಾಮಚಂದ್ರಪ್ಪರವರಿಗೆ ನಷ್ಟ ಸಂತತಿ ಇದ್ದರೂ ಸಹ ನಾವುಗಳು ಸದರಿಯವರ ಮಕ್ಕಳು ಮತ್ತು ವಂಶಸ್ಥರು ಎಂದು ನಿಪಿ:35 ರ ದಾಖಲೆಯನ್ನು ಸೃಷ್ಟಿಸಿಕೊಂಡಿರುತ್ತೇವೆ ಎಂದರೆ ಸರಿಯಲ್ಲ.

16. ಗಂಗನ ವಂಶಸ್ಥರು ಚೌಡಿಕೆ ವಂಶಸ್ಥರು ಎಂದರೆ ಸರಿ. ನಾನು ಅಸಾದಿ ವಂಶಸ್ಥರು ಎಂದರೆ ಸರಿಯಲ್ಲ. ನಮ್ಮ ವಂಶಸ್ಥರ ಹೆಸರಿನಲ್ಲಿ ಹಿರಿಯೂರು ತಾಲ್ಲೂಕು ಬುರುಜನರೊಪ್ಪದಲ್ಲಿ ಸರ್ವೇ ನಂ.137, ಹೊಸ ಸರ್ವೇನಂ.204 ರಲ್ಲಿ 5 ಎಕರೆ ಜಮೀನು ಇರುತ್ತದೆ ಎಂದರೆ ಸರಿ.

ಸಾಕ್ಷಿಗೆ ಒಂದು ಪಹಣಿಯನ್ನು ತೋರಿಸಲಾಗಿ ಸದರಿ ಪಹಣಿಯು ಹಿರಿಯೂರು ತಾಲ್ಲೂಕು ಬುರುಜನರೊಪ್ಪದಲ್ಲಿ ಸರ್ವೇ ನಂ.137, ಹೊಸ ಸರ್ವೇ ನಂ.204 ಕ್ಕೆ ಸೇರುತ್ತದೆ ಎಂದು ಗುರುತಿಸಿರುತ್ತಾರೆ. ಸದರಿ ದಾಖಲೆಯನ್ನು ನಿಡಿ:6 ಎಂದು ಗುರುತಿಸಲಾಯಿತು. ನಿಡಿ:6 ರಲ್ಲಿ ಖಬ್ಜೆದಾರ ಮತ್ತು ಸ್ವಾಧೀನದಾರ ಕಾಲಂನಲ್ಲಿ ಅಸಾದಿ ತಿಪ್ಪಯ್ಯ ಎಂಬ ಹೆಸರು ನಮೂದು ಇರುತ್ತದೆ ಎಂದರೆ ಸರಿ. ಸಾಕ್ಷಿಗೆ ದಿ:10-05-1950 ರ ದಾಖಲೆಯನ್ನು ತೋರಿಸಿ ಸದರಿ ದಾಖಲೆಯು ಸಾಗುವಳಿ ಚೀಟಿಯಾಗಿದ್ದು, ಸರ್ವೇ ನಂ.137, ಹೊಸ ಸರ್ವೇ ನಂ.204 ಕ್ಕೆ ಸೇರುತ್ತದೆ ಮತ್ತು ಸದರಿ ದಾಖಲೆಯಲ್ಲಿ ತಿಪ್ಪಯ್ಯ ಅಸಾದಿ ಬಿನ್ ಗಂಗಪ್ಪ ಎಂದು ನಮೂದು ಇರುತ್ತದೆ ಎಂದು ಗುರುತಿಸಿರುತ್ತಾರೆ. ಸದರಿ ದಾಖಲೆಯನ್ನು ನಿಡಿ:7 ಎಂದು ಗುರುತಿಸಲಾಯಿತು. ನಿಡಿ:7 ರ ಆಧಾರದ ಮೇಲೆ ನಿಡಿ:6 ರಲ್ಲಿ ಅಸಾದಿ ತಿಪ್ಪಯ್ಯರವರ ಹೆಸರು ನಮೂದು ಆಗಿರುತ್ತದೆ ಎಂದರೆ ಸರಿ.

17. ಸಾಕ್ಷಿಗೆ ವಿವಾದಸ್ಪದ ಪ್ರಕರಣದ ಪಟ್ಟಿಯ ಪ್ರತಿಯನ್ನು ತೋರಿಸಲಾಗಿ ಸದರಿ ದಾಖಲೆಯಲ್ಲಿ ಖಾತೆದಾರರು ಎಂದು ರಾಮಚಂದ್ರಪ್ಪ ಬಿನ್ ಅಸಾದಿ ತಿಪ್ಪಯ್ಯ ಇವರ ಹೆಂಡತಿ ಸಿದ್ದಮ್ಮ ಇಬ್ಬರು ಪೌತಿ ಮತ್ತು ಸದರಿಯವರ ವಾರಸುದಾರರು/ಮಕ್ಕಳು ಎಂದು ಯಲ್ಲಪ್ಪ, ತಿಪ್ಪೇಸ್ವಾಮಿ, ಜಯಣ್ಣ ಇವರುಗಳಿಗೆ ಜಂಟಿ ಖಾತೆ ಎಂದು ನಮೂದು ಇರುತ್ತದೆ ಎಂದರೆ ಸಾಕ್ಷಿಯು ದಾಖಲೆಯನ್ನು ನೋಡಿ ಸರಿ ಎಂದು ನುಡಿಯುತ್ತಾರೆ. ಸದರಿ ದಾಖಲೆಯನ್ನು ನಿಡಿ:8 ಎಂದು ಗುರುತಿಸಲಾಯಿತು. ಸದರಿ ನಿಡಿ:8 ರ ಆಧಾರದ ಮೇಲೆ ಸರ್ವೇ ನಂ.137, ಹೊಸ ಸರ್ವೇ ನಂ.204 ಜಮೀನಿನ 2016-17 ಪಹಣಿಯಲ್ಲಿ ಯಲ್ಲಪ್ಪ, ತಿಪ್ಪೇಸ್ವಾಮಿ ಮತ್ತು ನನ್ನ ಹೆಸರು ಜಂಟಿಯಾಗಿ ನಮೂದು ಆಗಿರುತ್ತದೆ ಎಂದು ಸಾಕ್ಷಿಗೆ 2016-17 ರ ಪಹಣಿಯನ್ನು ತೋರಿಸಿದಾಗ ಸರಿ ಎಂದು ನುಡಿಯುತ್ತಾರೆ. ಸದರಿ 2016-17 ರ ಪಹಣಿಯನ್ನು ನಿಡಿ:9 ಎಂದು ಗುರುತಿಸಲಾಯಿತು. ಸದರಿ ದಾವೆಯಲ್ಲಿ ಸರ್ವೇ ನಂ.137, ಹೊಸ ಸರ್ವೇ ನಂ.204 ರ ಜಮೀನನ್ನು ಸೇರಿಸಲಾಗಿದೆ. ಆದರೆ ಸೇರಿಸಿದ ದಿನಾಂಕ ಗೊತ್ತಿಲ್ಲ. ನಾನು ಅಸಾದಿ ವಂಶಸ್ಥ ಮತ್ತು ಪ್ರತಿವಾದಿಯರು ಚೌಡಿಕೆ ವಂಶಸ್ಥರು ಇರುವ ಕಾರಣ ಸರ್ವೇ ನಂ.137, ಹೊಸ ಸರ್ವೇ ನಂ.204 ರ ಜಮೀನನ್ನು ಈ ದಾವೆಯಲ್ಲಿ ಸೇರಿಸಿಲ್ಲ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರಿದು ನಾನು ಚೌಡಿಕೆ ವಂಶಸ್ಥ ಎಂದು ನುಡಿಯುತ್ತಾರೆ. ಸದರಿ ವಿಚಾರಕ್ಕೆ

ಸಂಬಂಧಿಸಿದಂತೆ ನ್ಯಾಯಾಲಯಕ್ಕೆ ದಾಖಲೆಯನ್ನು ಹಾಜರುಪಡಿಸಿಲ್ಲ. ವಾದಿಯರು ಎಲ್ಲರು ಮೂಲಪುರುಷ ಗಂಗನ ವಂಶಸ್ಥರಲ್ಲ ಎಂದರೆ ಸರಿಯಲ್ಲ.

18. ನಿಪಿಃ35 ರಲ್ಲಿ ಕೊಲಾರಪ್ಪ ಗಂಗನ ಎರಡನೇ ಮಗ ಎಂದು ಸುಳ್ಳಾಗಿ ನಮೂದಿಸಲಾಗಿದೆ ಎಂದರೆ ಸರಿಯಲ್ಲ. ಕೊಲಾರಪ್ಪನ ಹೆಂಡತಿ ನಿಪಿಃ35 ರಲ್ಲಿ ನಮೂದಿಸಿರುವಂತೆ ಹಿರಿಯವ್ವ ಅಲ್ಲ ಆದರೆ ಲಕ್ಷ್ಮವ್ವ ಎಂದರೆ ಸರಿಯಲ್ಲ. ಗಂಗನ ಮೂರನೇ ಮಗ ಪರಸಪ್ಪ ಪೌತಿಯಾದ ನಿಖರವಾದ ದಿನಾಂಕ, ತಿಂಗಳು ಮತ್ತು ವರ್ಷ ನನಗೆ ಗೊತ್ತಿಲ್ಲ. ಅಂದಾಜು ಎಷ್ಟು ವರ್ಷಗಳ ಹಿಂದೆ ಪೌತಿಯಾದರು ಎಂದು ಹೇಳಲು ಆಗುವುದಿಲ್ಲ. ಪರಸಪ್ಪನ ಹೆಂಡತಿ ಹಿರಿಯಮ್ಮ ಪೌತಿಯಾದ ನಿಖರವಾದ ದಿನಾಂಕ, ತಿಂಗಳು ಮತ್ತು ವರ್ಷ ನನಗೆ ಗೊತ್ತಿಲ್ಲ. ಪರಸಪ್ಪನ ಮಗ ತಿಮ್ಮಯ್ಯ ಮತ್ತು ಸದರಿಯವರ ಹೆಂಡತಿ ದುರ್ಗಮ್ಮ ಪೌತಿಯಾದ ನಿಖರವಾದ ದಿನಾಂಕ, ತಿಂಗಳು ಮತ್ತು ವರ್ಷ ನನಗೆ ಗೊತ್ತಿಲ್ಲ. ಸದರಿ ತಿಮ್ಮಯ್ಯ ಮತ್ತು ದುರ್ಗಮ್ಮರವರಿಗೆ 3 ಜನ ಮಕ್ಕಳು ಇರುತ್ತಾರೆ. ಸಾಕ್ಷಿಯು ಮುಂದುವರಿದು ಒಬ್ಬನೇ ಮಗ ತಿಪ್ಪೇಸ್ವಾಮಿ ಎಂದು ನುಡಿಯುತ್ತಾರೆ. ಹೆಣ್ಣು ಮಕ್ಕಳು ಎಷ್ಟು ಜನ ಎಂದು ನನಗೆ ಗೊತ್ತಿಲ್ಲ. ಸದರಿ ತಿಪ್ಪೇಸ್ವಾಮಿ ಈ ದಾವೆಯ 8 ನೇ ಪ್ರತಿವಾದಿ ಎಂದರೆ ಸರಿ. ತಿಮ್ಮಯ್ಯ ಮತ್ತು ದುರ್ಗಮ್ಮರವರಿಗೆ ಪಾಪಮ್ಮ, ತಿಮ್ಮಕ್ಕ, ನಿಂಗಮ್ಮ, ಶಾಂತಮ್ಮ ಮತ್ತು ಯಲ್ಲಮ್ಮ ಎಂಬ ಹೆಣ್ಣು ಮಕ್ಕಳು ಇರುತ್ತಾರೆ ಎಂದರೆ ಇರಬಹುದು ಅವರು ಕೊಟ್ಟ ಮನೆಗೆ ಹೋಗಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ ಹೆಣ್ಣು ಮಕ್ಕಳನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿಲ್ಲ. ಸದರಿ ಹೆಣ್ಣು ಮಕ್ಕಳನ್ನು ಪಕ್ಷಗಾರರನ್ನಾಗಿ ಮಾಡದೇ ಹೂಡಿರುವ ಈ ದಾವೆ ಊರ್ಜಿತವಲ್ಲ ಎಂದರೆ ಸಾಕ್ಷಿಯು ಸುಮ್ಮನೆ ನಿಂತಿರುತ್ತಾರೆ.

19. ಗಂಗರವರ ನಾಲ್ಕನೇ ಮಗ ಚಿಕ್ಕುಲಿ ತಿಮ್ಮಯ್ಯ ಮತ್ತು ಅವರ ಹೆಂಡತಿ ಯಲ್ಲಮ್ಮ ಪೌತಿಯಾದ ನಿಖರವಾದ ದಿನಾಂಕ, ತಿಂಗಳು ಮತ್ತು ವರ್ಷ ನನಗೆ ಗೊತ್ತಿಲ್ಲ. ಎಷ್ಟು ವರ್ಷಗಳ ಹಿಂದೆ ಪೌತಿಯಾಗಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಚಿಕ್ಕುಲಿ ತಿಮ್ಮಯ್ಯ ಮತ್ತು ಯಲ್ಲಮ್ಮರವರಿಗೆ ಗೋವಿಂದಪ್ಪ, ರಾಮಚಂದ್ರಪ್ಪ ಮತ್ತು ತಿಪ್ಪಯ್ಯ ಎಂಬ ಮೂರು ಮಕ್ಕಳು ಎಂದರೆ ಸರಿ. ಚಿಕ್ಕುಲಿ ತಿಮ್ಮಯ್ಯ ಮತ್ತು ಯಲ್ಲಮ್ಮರವರಿಗೆ ನಿಂಗಮ್ಮ, ಚಂದ್ರಮ್ಮ, ತಿಮ್ಮಕ್ಕ ಮತ್ತು ಸಾಕಮ್ಮ ಎಂಬ ಹೆಣ್ಣು ಮಕ್ಕಳು ಇರುತ್ತಾರೆ ಎಂದರೆ ಸರಿ. ಅವರುಗಳನ್ನು ಮದುವೆ ಮಾಡಿಕೊಡಲಾಗಿದೆ ಎಂದು ನುಡಿಯುತ್ತಾರೆ. ಸದರಿ ಹೆಣ್ಣು ಮಕ್ಕಳನ್ನು ಈ ದಾವೆಯಲ್ಲಿ

ಪಕ್ಷಗಾರರನ್ನಾಗಿ ಮಾಡಿಲ್ಲ. ಸದರಿ ಹೆಣ್ಣು ಮಕ್ಕಳನ್ನು ಪಕ್ಷಗಾರರನ್ನಾಗಿ ಮಾಡದೇ ಹೂಡಿರುವ ಈ ದಾವೆ ಊರ್ಜಿತವಲ್ಲ ಎಂದರೆ ಸಾಕ್ಷಿಯು ಸುಮ್ಮನೆ ನಿಂತಿರುತ್ತಾರೆ.

20. ಗಂಗರವರ ಐದನೇ ಮಗ ಕಟ್ಟೆ ಯಲ್ಲಪ್ಪ ಮತ್ತು ಅವರ ಹೆಂಡತಿ ತಿಪ್ಪಮ್ಮರವರು ಪೌತಿಯಾದ ನಿಖರವಾದ ದಿನಾಂಕ, ತಿಂಗಳು ಮತ್ತು ವರ್ಷ ನನಗೆ ಗೊತ್ತಿಲ್ಲ. ಎಷ್ಟು ವರ್ಷಗಳ ಹಿಂದೆ ಪೌತಿಯಾಗಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಸದರಿಯವರಿಗೆ ಗಂಗಪ್ಪ, ಕೊಲಾರಪ್ಪ, ಭೀಮಪ್ಪ, ಶಿವಣ್ಣ, ನಿಂಗಮ್ಮ, ಯಲ್ಲಮ್ಮ, ಲಕ್ಷ್ಮಕ್ಕ ಎಂಬ ಮಕ್ಕಳಿರುತ್ತಾರೆ ಎಂದರೆ ಸರಿ. ನಿಂಗಮ್ಮ, ಯಲ್ಲಮ್ಮ, ಲಕ್ಷ್ಮಕ್ಕರವರನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿಲ್ಲ. ಸದರಿ ಹೆಣ್ಣು ಮಕ್ಕಳನ್ನು ಪಕ್ಷಗಾರರನ್ನಾಗಿ ಮಾಡದೇ ಹೂಡಿರುವ ಈ ದಾವೆ ಊರ್ಜಿತವಲ್ಲ ಎಂದರೆ ಸಾಕ್ಷಿಯು ಕಟ್ಟೆ ಯಲ್ಲಪ್ಪರವರಿಗೆ ಸಂಬಂಧಿಸಿದ್ದು ಎಂದು ನುಡಿಯುತ್ತಾರೆ.

21. ಗಂಗಪ್ಪ ಮತ್ತು ಬಸವ್ವರವರ ಮಕ್ಕಳು ಪೌತಿಯಾದ ಬಗ್ಗೆ ಮರಣ ಪ್ರಮಾಣಪತ್ರವನ್ನು ಪಡೆದುಕೊಂಡಿಲ್ಲ ಎಂದರೆ ಸರಿ. ಸಾಕ್ಷಿಯು ಮುಂದುವರಿದು ಆ ಕಾಲದಲ್ಲಿ ಅಂದರೆ 1960 ರಿಂದ 1970ನೇ ಸಾಲಿನಲ್ಲಿ ಪ್ರಮಾಣಪತ್ರ ಯಾವವು ಇರಲಿಲ್ಲ ಎಂದು ನುಡಿಯುತ್ತಾರೆ. ನಿಪಿಃ35 ಛಾಪಾ ಕಾಗದ 2015 ನೇ ಸಾಲಿನಲ್ಲಿ ಖರೀದಿಸಲಾಗಿದೆ ಎಂದರೆ ಸರಿ.

22. ನಿಪಿಃ35 ರಲ್ಲಿ ಸಾಕ್ಷಿಗಳ ಕಾಲಂ, ವಕೀಲರ ಕಾಲಂ, ನನ್ನ ಸಮಕ್ಷಮ ಕಾಲಂ ಖಾಲಿ ಇದೆ ಎಂದರೆ ಸರಿ. ನಿಪಿಃ35 ಪಡೆಯುವ ಕಾಲಕ್ಕೆ ಗ್ರಾಮಸ್ಥರಾದ ಅಪ್ಪಣ್ಣರೆಡ್ಡಿ ಮತ್ತು ಇನ್ನಿಬ್ಬರ ಸಹಿಗಳನ್ನು ಪಡೆಯಲಾಗಿರುತ್ತದೆ. ಸದರಿ ವಿಚಾರವಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿಃ36 ರಲ್ಲಿ ನಮೂದಿಸಿರುವಂತೆ ಪಡಿತರ ಚೀಟಿ, ಚುನಾವಣಾ ಗುರುತಿನ ಚೀಟಿ ಮತ್ತು ಆಧಾರ ಕಾರ್ಡ ಲಗತ್ತಿಸಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಮತ್ತು ವಂಶಸ್ಥರು ರಾಮಜೋಗಿಹಳ್ಳಿಯಲ್ಲಿ ವಾಸ ಇರುವ ಪುರಾವೆಗೆ ಪಡಿತರ ಚೀಟಿ, ಚುನಾವಣಾ ಗುರುತಿನ ಚೀಟಿ ಮತ್ತು ಆಧಾರ ಕಾರ್ಡನ್ನು ಕೊಡಲು ನನಗೆ ಯಾವುದೇ ತೊಂದರೆ ಇಲ್ಲ. ನಾನು ಅಸಾದಿ ವಂಶಸ್ಥನಾಗಿರುವುದರಿಂದ ಈ ಮೇಲೆ ದಾಖಲೆಯನ್ನು ಒದಗಿಸಲು ಆಗುವುದಿಲ್ಲ ಎಂದರೆ ಸರಿಯಲ್ಲ. ನಿಪಿಃ35 ಮತ್ತು ನಿಪಿಃ36 ರ ದಾಖಲೆಯಲ್ಲಿ ಕಂದಾಯ ಇಲಾಖೆಯ ಪ್ರಾಧಿಕಾರಕ್ಕೆ ಮಾತ್ರ ಸಲ್ಲಿಸಲು ದೃಡೀಕರಿಸಿದೆ ಎಂದು ನಮೂದು ಇದ್ದರು ಸಹ ನ್ಯಾಯಾಲಯದ ಮುಂದೆ ಪ್ರತಿವಾದಿಯರ ಆಸ್ತಿಯನ್ನು ಲಪಟಾಯಿಸುವ ಉದ್ದೇಶದಿಂದ ಹಾಜರುಪಡಿಸಲಾಗಿದೆ ಎಂದರೆ ಸರಿಯಲ್ಲ.

23. ನಾನು ಮತ್ತು ನನ್ನ ವಂಶಸ್ಥರು ಬುರುಜನರೊಪ್ಪದ ವಾಸಿಯಾಗಿದ್ದರೂ ಸಹ ರಾಮಜೋಗಿಹಳ್ಳಿಯ ವಾಸಿಗಳು ಎಂದು ಸುಳ್ಳಾಗಿ ತಿಳಿಸಿ ಮತ್ತು ಗಂಗ ಮತ್ತು ಬಸಪ್ಪರವರ ಮಕ್ಕಳ ಮರಣ ಪ್ರಮಾಣಪತ್ರವನ್ನು ಸಲ್ಲಿಸಲು ಪಡೆದುಕೊಂಡಿರುವ ನಿಪಿಃ35 ಮತ್ತು ನಿಪಿಃ36 ರ ದಾಖಲೆಗಳು ಕಾನೂನು ಊರ್ಜಿತವಲ್ಲ ಎಂದರೆ ಸರಿಯಲ್ಲ.

**( ಪ್ರತಿವಾದಿ ಪರ ವಕೀಲರ ಕೋರಿಕೆಯ ಮೇರೆಗೆ ಪಾಟೀ ಸವಾಲನ್ನು ಮುಂದೂಡಲಾಯಿತು)**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿಯಿದೆ,

ಅಪರ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.,
ನ್ಯಾಯಾಧೀಶರು, ಚಳ್ಳಕೆರೆ.